## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ : 28-12-2022

### ಸಂತಪೂರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 134/2022 ಕಲಂ 279, 337, 304(ಎ) ಐಪಿಸಿ ಜೊತೆ 187 ಐಎಮ.ವಿ. ಕಾಯ್ದೆ :-

ದಿನಾಂಕ 27/12/2022 ರಂದು 13.30 ಗಂಟೆಯ ಸುಮಾರಿಗೆ ಶ್ರೀ ಪ್ರಶಾಂತ ತಂದೆ ವಿಠಲರಾವ ಕೌಟಗೆ ಸಾ/ ಸಂತಪೂರ ಇವರು ಠಾಣೆಗೆ ಹಾಜರಾಗಿ ಮೌಖಿಕ ಹೇಳಿಕೆ ನೀಡಿದರ ಸಾರಾಂಶವೆನೆಂದರೆ ದಿ : 27/12/2022 ರಂದು ಬೆಳ್ಳಿಗ್ಗೆ ಅಳ್ಳ (ಮಂಡಕ್ಕಿ) ಮಾರುತ್ತಾ ಚಟನಾಳ ಜಿರ್ಗಾ(ಬಿ) ಗ್ರಾಮಕ್ಕೆ ಹೊಗಿ ಅಳ್ಳು (ಮಂಡಕಿ) ಮಾರಿಕೊಂಡು ಜಿರ್ಗಾ(ಬಿ) ಬಸ ನಿಲ್ದಾಣದ ಹತ್ತಿರ ಒಂದು ಕಿರಾಣಿ ಅಂಗಡಿಯ ಮುಂದೆ ನಿಂತಾಗ ಅಂದಾಜು 11.30 ಗಂಟೆಯ ಸುಮಾರಿಗೆ ಬೀದರ- ಔರಾದ(ಬಿ) ರೊಡಿನ ಜಿರ್ಗಾ(ಬಿ) ಕ್ರಾಸ ಹತ್ತಿರ ಜಿರ್ಗಾ(ಬಿ) ಗ್ರಾಮದ ಹತ್ತಿರ ಮೋಟಾರ ಸೈಕಲ ನಂ ಟಿ.ಎಸ್. 16 ಇ.ಯು 4206 ಇದ್ದು ಮತ್ತು ಸಂತಪೂರ ಕಡೆಯಿಂದ ಹೋಗುತ್ತಿದ್ದ ಮೊಟಾರ ಸೈಕಲ ಕೆ ಎ 38 ಎಕ್ಸ 9434 ಇದ್ದು ಇಬ್ಬರು ಪರಸ್ಪರ ಡಿಕ್ಕಿ ಮಾಡಿದ್ದರಿಂದ ಸ್ಥಳದಲ್ಲಿ ಡಿಕ್ಕಿಯಾಗಿ ಬೀದ್ದ ವ್ಯಕ್ತಿಗೆ ವಿಚಾರಿಸಿದ್ದು ಅವನು ತನ್ನ ಹೆಸರು ಎಸ್,ಕೆ ಅಥರ ತಂದೆ ಎಸ್,ಕೆ ಅಹ್ಮೆದ ಹುಸೇನ ಸಾ/ ಧರ್ಮಬಾದ ಜಿಲ್ಲಾ ನಾಂದೇಡ ಅಂತ ತಿಳಿಸಿದ್ದು ಇನ್ನೋಬನಿಗೆ ಎಡಗಲ್ಲದ ಮೇಲೆ ತರಚಿದ ರಕ್ತಗಾಯ. ತಲೆಯ ಹಿಂದೆ ರಕ್ತಗಾಯ.ಬಲಗೈ ಮುಂಗೈಗೆ ತರಚಿದಗಾಯ. ಬಲಗಾಲಿನ ಬೆರಳುಗಳಿಗೆ ರಕ್ತಗಾಯ ವಾಗಿದ್ದು ಅವನ ಹೆಸರು ಮಹ್ಮದ ಸಾಜಿದ ತಂದೆ ಮಹ್ಮದ ಯಕಬಾಲ ಸಾ/ ಧರ್ಮಬಾದ ಅಂತ ತಿಳಿಸಿದ್ದು ಅವನಿಗೆ ತಲೆಯಲ್ಲಿ. ಮತ್ತು ಎಡಕೀವಿಯ ಹತ್ತಿರ ಪೆಟ್ಟಾಗಿ ಭಾರಿ ರಕ್ತಗಾಯ.ಮತ್ತು ಕಿವಿಯಿಂದ ರಕ್ತಗಾಯ ಸ್ರಾವ ಆಗುತ್ತಿದ್ದು ಸ್ಥಳದಲ್ಲಿ ಮೃತ್ತ ಪಟ್ಟಿರುತ್ತಾನೆ . ಕಾರಣ ಮೋಟಾರ ಸೈಕಲ ನಂ ಕೆ ಎ 38 ಎಕ್ಸ 9434 ನೇದರ ಚಾಲಕನು ಅತಿವೇಗ ಹಾಗೂ ಅಲಕ್ಷತನದಿಂದ ನಡೆಸಿಕೊಂಡು ಬಂದಿದರಿಂದ ಅಪಘಾತ ವಾಗಿರುತದೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಔರಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 155/2022 ಕಲಂ 379 ಐಪಿಸಿ :-

ದಿನಾಂಕ: 27-12-2022 ರಂದು ಫಿರ್ಯಾದಿಯು ಶೇಶರಾವ ತಂದೆ ವೈಜಿನಾತ ಭಂಡೆ ಸಾ: ಬಸವನಗಲ್ಲಿ ಔರಾದ ರವರು ನೀಡಿದ ದೂರಿನ ಸಾರಾಂಶವೆನಂದರೆ ದಿ: 05-12-2022 ರಂದು 1900 ಗಂಟೆಯಿಂದ 06-12-2022 ರಂದು 1400 ಗಂಟೆಯ ಅವಧಿಯಲ್ಲಿ ಎಕಂಬಾ ಗ್ರಾಮದ ಸರ್ವೆ ನಂ. 186/2 ರಲ್ಲಿಯ 8 ಎಕರೆ ಜಮಿನಿನಲ್ಲಿರುವ ಬಾವಿಗೆ ಇದ್ದ ನೀರಿನ ಮೋಟಾರ ಮತ್ತು ಅದಕ್ಕೆ ಅಳವಡಿಸಿರುವ ವೈರಗಳು ಅಂ.ಕಿ. 20,000/- ರೂ. ನೇದ್ದನ್ನು ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಭಾಲ್ಕಿ ಗ್ರಾಮೀಣ ಠಾಣೆ ಗುನ್ನೆ ನಂ 175/2022 ಕಲಂ 279,337,338, 304(ಎ) ಐ.ಪಿ.ಸಿ 187 ಐ.ಎಮ.ವಿ ಎಕ್ಟ :-

ದಿನಾಂಕ: 27/12/2022 ರಂದು ಫಿರ್ಯಾದಿ ಶ್ರೀಮತಿ. ಜಬೀನ ಗಂಡ ಅಬ್ರಾರ ಪಠಾಣ ವಯ: 26 ವರ್ಷ, ರವವರು ತನ್ನ ಅಕ್ಕಳ ಮನೆ ಶಿವಣಿಯಿಂದ ನಾಂದೇಡಕ್ಕೆ ಹೋಗಲು ಭಾಲ್ಕಿಯಿಂದ ಸಂಬಂಧಿಕರ ಮನೆಯಿಂದ ಮೋಟಾರ ಸೈಕಲ ನಂ ಕೆಎ 39 ಜೆ 8599 ನೇದ್ದರ ಮೇಲೆ ಇವರ ಪತಿ ಹಾಗೂ ಎರಡು ಮಕ್ಕಳು ಶಿವಣಿಯಿಂದ ಭಾಲ್ಕಿಗೆ ಹೊರಟಿದಾಗ ಮುಂದುಗಡೆ ಮೋಟಾರ ಸೈಕಲ ಮೇಲೆ ಮಗನಾದ ಹಂಜಲಾ ಇವನ್ನನ್ನು ಕೂಡಿಸಿಕೊಂಡು ಬರುವಾಗ ಶಿವಣಿ ಕಾಕನಾಳ ರೋಡ ದಾರಿಯಲ್ಲಿ ಕಾರಂಜಾ ಕೆನಾಲ ಪಕ್ಕದಲ್ಲಿನ ರೋಡಿನ ಮೇಲೆ ಕಾಕನಾಳ ಸಮೀಪದಲ್ಲಿ ಬರುವಾಗ ಅಂದಾಜು 10:15 ಗಂಟೆಯ ಸುಮಾರಿಗೆ ಎದುರಿನಿಂದ ಒಂದು ಕೆ.ಎಸ.ಆರ.ಟಿ.ಸಿ ಬಸ ನಂ ಕೆಎ 38 ಎಫ 547 ನೇದ್ದರ ಚಾಲಕ ತನ್ನ ಬಸನ್ನು ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಮಾನವ ಜೀವಕ್ಕೆ ಅಪಾಯಕರವಾದ ರೀತಿಯಲ್ಲಿ ನಡೆಯಿಸಿ ಎದುರಿನಿಂದ ನಮ್ಮ ಮೋಟಾರ ಸೈಕಲಿಗೆ ಜೋರಾಗಿ ಡಿಕ್ಕಿಮಾಡಿದ್ದರಿಂದ ಮೋಟಾರ ಸೈಕಲ ಸಮೇತ ಕೆಳಗೆ ಬಿದ್ದಿದ್ದು, ಇದರಿಂದ ಮಗ ಹಂಜಾಲಾ ಮುಖ ಹಾಗು ತಲೆಯಲ್ಲಿ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾನೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.